NOVEMBER 03, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **‘ವಂದೇ ಭಾರತ’, ನಾಲ್ಕು ರೈಲುಗಳಿಗೆ, 7ನೇ ತಾರೀಖು, ಪ್ರಧಾನಮಂತ್ರಿ ನರೇಂದ್ರ ಮೋದಿ, ಹಸಿರು ಧ್ವಜ.**
- **‘ಜಾಗರೂಕತೆ, ನಮ್ಮ ಸಾಮೂಹಿಕ ಹೊಣೆ’ ಧ್ಯೇಯದ, ವಿಚಕ್ಷಣಾ ಜಾಗೃತಿ ಸಪ್ತಾಹ ಸಂಪನ್ನ.**
- **ಜಾನುವಾರುಗಳ ಕಾಲು–ಬಾಯಿ ರೋಗ ತಡೆ,ಉಚಿತ ಲಸಿಕೆ ನೀಡಿಕೆ, ರಾಷ್ಟ್ರೀಯ ಮಾಸಿಕ ಅಭಿಯಾನಕ್ಕೆ, ಇಂದು ಚಾಲನೆ.**
- **ಭಾರತದ ಮಹಿಳಾ ಕ್ರಿಕೆಟ್ ತಂಡ, ವಿಶ್ವ ಚಾಂಪಿಯನ್; ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿ ಅಭಿನಂದನೆ.**

<><><>

**ಈಗ ವಾರ್ತೆಗಳ ವಿವರ**

<><><>

**7 ನೇ ತಾರೀಖು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಲ್ಕು ಹೊಸ ‘ವಂದೇ ಭಾರತ’ ರೈಲುಗಳಿಗೆ, ಚಾಲನೆ ನೀಡಲಿದ್ದಾರೆ ಎಂದು, ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆ, ಬೀರೂರು ರೈಲು ನಿಲ್ದಾಣಕ್ಕೆ ಭೇಟಿ ನೀಡಿ, ಸಚಿವರು ಪರಿಶೀಲಿಸಿದರು. ದೇಶಾದ್ಯಂತ, 144 ವಂದೇ ಭಾರತ ರೈಲುಗಳು ಸಂಚರಿಸುತ್ತಿವೆ. ಕೇರಳದ ಎರ್ನಾಕುಲಂ ನಿಂದ ಬೆಂಗಳೂರಿನ ವರೆಗೆ, ಅತಿ ಹೆಚ್ಚು ದೂರ ಸಂಚರಿಸಲಿರುವ ರೈಲಿಗೂ, ಅಂದೇ ಚಾಲನೆ ಸಿಗಲಿದೆ ಎಂದರು. ಕರ್ನಾಟಕದ ಎಲ್ಲ ರೈಲು ನಿಲ್ದಾಣಗಳಿಗೆ, ವಿಮಾನ ನಿಲ್ದಾಣ ಸದೃಷ ಮೂಲಸೌಕರ್ಯ ಒದಗಿಸಲಾಗುತ್ತಿದೆ. 89 ರೈಲು ನಿಲ್ದಾಣಗಳಲ್ಲಿ, ದೇಶಿ ಉತ್ಪನ್ನಗಳ ಮಾರಾಟಕ್ಕೆ, ಚಾಲನೆ ನೀಡಲಾಗಿದೆ ಎಂದು, ಸಚಿವ ವಿ. ಸೋಮಣ್ಣ ಹೇಳಿದರು.**

<><><>

ಸರಕು ಮತ್ತು ಸೇವಾ ತೆರಿಗೆ, ನೆಕ್ಸ್ಟ್ ಜೆನ್ ಜಿ.ಎಸ್.ಟಿ., 2ನೇ ಆವೃತ್ತಿಯ ಪರಿಷ್ಕರಣೆ ಬಳಿಕ, ಕರ್ನಾಟಕ ಸೇರಿದಂತೆ, ದೇಶಾದ್ಯಂತ ವ್ಯಾಪಾರ, ವಹಿವಾಟು ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ರಾಜ್ಯದಲ್ಲಿ, ಕಳೆದ ವರ್ಷದ ಅಕ್ಟೋಬರ್ ತಿಂಗಳಲ್ಲಿ, 13 ಸಾವಿರದ 81 ಕೋಟಿ ರೂಪಾಯಿ ತೆರಿಗೆ ಸಂಗ್ರಹವಾಗಿತ್ತು. ಜಿ.ಎಸ್.ಟಿ. ಪರಿಷ್ಕರಣೆ ಬಳಿಕ, ಪ್ರಸಕ್ತ 2025ರ ಅಕ್ಟೋಬರ್ ತಿಂಗಳಾಂತ್ಯಕ್ಕೆ, ಒಟ್ಟು 14 ಸಾವಿರದ 3 ನೂರಾ 95 ಕೋಟಿ ರೂಪಾಯಿ ತೆರಿಗೆ ಸಂಗ್ರಹವಾಗಿದ್ದು, ಶೇಕಡ 10 ರಷ್ಟು ವೃದ್ಧಿಯಾಗಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ ಬಣ್ಣಿಸಿದ್ದಾರೆ. ಜಿ.ಎಸ್.ಟಿ. ತೆರಿಗೆ ಪ್ರಕ್ರಿಯೆ ಸರಳಗೊಂಡು, ವ್ಯಾಪಾರಿಗಳಿಗೆ ಅನುಕೂಲವಾಗಿದೆ. ಅಕ್ಟೋಬರ್‌ನಲ್ಲಿ ದೇಶದ ತೆರಿಗೆ ಸಂಗ್ರಹಣೆ, 1 ಲಕ್ಷ 95 ಸಾವಿರದ 936 ಕೋಟಿ ರೂಪಾಯಿಗೆ ಏರಿಕೆಯಾಗಿದೆ, ಎಂದಿದ್ದಾರೆ.

<><><>

‘ಜಾಗರೂಕತೆ, ನಮ್ಮ ಸಾಮೂಹಿಕ ಹೊಣೆಗಾರಿಕೆ’ ಎಂಬ ಧ್ಯೇಯದೊಂದಿಗೆ, ವಿಚಕ್ಷಣಾ ಜಾಗೃತಿ ಸಪ್ತಾಹವನ್ನು, ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ, ಜನ ಸಹಭಾಗಿತ್ವದಲ್ಲಿ ಆಚರಿಸಲಾಯಿತು. 2025ನೇ ಸಾಲಿನ ವಿಚಕ್ಷಣಾ ಜಾಗೃತಿ ಸಪ್ತಾಹ ನಿನ್ನೆಗೆ ಮುಕ್ತಾಯಗೊಂಡಿತು. ಕೇಂದ್ರೀಯ ವಿಚಕ್ಷಣಾ ಆಯೋಗದ ನಿರ್ದೇಶನದನ್ವಯ, ರಾಜ್ಯಾದ್ಯಂತ ಒಮದು ವಾರ ಕಾಲ, ವಿಚಕ್ಷಣಾ ಸಪ್ತಾಹ ಜರುಗಿತು.

<><><>

ಈ ಕುರಿತು ಒಂದು ವರದಿ..

<><><>

*ಹಿರಿಯ ಗಾಂಧಿವಾದಿ, ಸ್ವತಂತ್ರ ಭಾರತದ ಪ್ರಥಮ ಗೃಹ ಮಂತ್ರಿ, ಉಕ್ಕಿನ ಮನುಷ್ಯ ಎಂದೇ ಖ್ಯಾತರಾದ, ಬಾರ್ಡೋಲಿಯ ಸರ್ದಾರ, ವಲ್ಲಭ್ ಭಾಯ್ ಪಟೇಲ ಅವರ, 150ನೇ ಜಯಂತ್ಯುತ್ಸವದ ಹಿನ್ನೆಲೆ, ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ, ಐಕ್ಯತೆ, ಪಾರದರ್ಶಕತೆ ಮತ್ತು ಘನತೆಯನ್ನು, ಕಾಪಾಡುವ ನಿಟ್ಟಿನಲ್ಲಿ, ಪ್ರತಿ ವರ್ಷ ಅಕ್ಟೋಬರ್ 27 ರಿಂದ ನವೆಂಬರ್ 2ನೇ ತಾರೀಖಿನ ವರೆಗೆ, ವಿಚಕ್ಷಣಾ ಸಪ್ತಾಹ ಹಾಗೂ ಜನ ಜಾಗೃತಿ ಕಾರ್ಯಕ್ರಮಗಳನ್ನು, ಕೇಂದ್ರೀಯ ವಿಚಕ್ಷಣಾ ಆಯೋಗ ಆಯೋಜಿಸುತ್ತದೆ. ವಿಚಕ್ಷಣಾ ಸಪ್ತಾಹದ ಅಂಗವಾಗಿ, ಸೈಬರ್ ಸುರಕ್ಷತೆ, ಆನ್ಲೈನ್ ಹಣಕಾಸು ವ್ಯವಹಾರಗಳಲ್ಲಿ, ಸಾರ್ವಜನಿಕರು ವಹಿಸಬೇಕಾದ ಮುಂಜಾಗ್ರತೆ ಕುರಿತು, ವಿಶೇಷ ಉಪನ್ಯಾಸ, ಕಾರ್ಯಾಗಾರ ಹಾಗೂ ಪ್ರಾತ್ಯಕ್ಷಿಕೆಗಳು ರಾಜ್ಯಾದ್ಯಂತ ಜರುಗಿದವು.  ವಿಚಕ್ಷಣಾ ಸಪ್ತಾಹದಲ್ಲಿ, ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು, ಹಣಕಾಸು ಸೇರಿದಂತೆ, ಇತರೆ ವ್ಯವಹಾರಗಳನ್ನು, ಆನ್ಲೈನ್‌ನಲ್ಲಿ ಸುರಕ್ಷಿತವಾಗಿ ಕೈಗೊಳ್ಳುವ ಬಗ್ಗೆ, ಶ್ರೀ ಸಾಮಾನ್ಯರಲ್ಲಿ ಅರಿವು ಮೂಡಿಸಿದವರು, ಕೆನರಾ ಬ್ಯಾಂಕಿನ ನಿವೃತ್ತ ಪ್ರಬಂಧಕ ಪ್ರಲ್ಹಾದ ಕೌತಾಳ. ಸಾರ್ವಜನಿಕ ಜೀವನದಲ್ಲಿ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಗೂ ಸೈಬರ್ ಅಪರಾಧಗಳ ಬಗ್ಗೆ, ವಯಕ್ತಿಕ ಮತ್ತು ಸಾಮೂಹಿಕ ಎಚ್ಚರ ಅಗತ್ಯ ಎಂದು, ಅವರು ಅಭಿಪ್ರಾಯಪಟ್ಟಿದ್ದಾರೆ.*

<><><>

ವಿವೇಕ (50) + ಪ್ರಲ್ಹಾದ ಕೌತಾಳ ಧ್ವನಿ (50) ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

8ನೇ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಅಭಿಯಾನದಡಿ, ಇಂದಿನಿಂದ ಡಿಸೆಂಬರ್ 2 ರ ವರೆಗೆ, ಜಾನುವಾರುಗಳಿಗೆ, ಕಾಲು–ಬಾಯಿ ರೋಗ ತಡೆ,ಉಚಿತ ಲಸಿಕೆ ನೀಡಿಕೆ ಕಾರ್ಯಕ್ರಮವನ್ನು, ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆ, ರಾಜ್ಯಾದ್ಯಂತ ಆಯೋಜಿಸಿದೆ. 2030ರ ವೇಳೆಗೆ, ಜಾನುವಾರುಗಳ ಕಾಲು–ಬಾಯಿ ರೋಗದ, ಸಂಪೂರ್ಣ ಹತೋಟಿ ಹಾಗೂ ನಿರ್ಮೂಲನೆಯ ಗುರಿ, ಹೊಂದಲಾಗಿದೆ.

<><><>

ಕಲಬುರಗಿ ಜಿಲ್ಲೆಯಲ್ಲಿ, ಒಟ್ಟು 3 ಲಕ್ಷ 37 ಸಾವಿರದ, 9 ನೂರಾ 33 ಜಾನುವಾರುಗಳಿದ್ದು, ಲಸಿಕೆ ನೀಡಲು 412 ತಂಡಗಳನ್ನು ರಚಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

<><><>

ಜಾನುವಾರುಗಳಲ್ಲಿ, ಕಾಲು ಬಾಯಿ ರೋಗವನ್ನು ತಡೆಗಟ್ಟುವ ಕ್ರಮಗಳ ಕುರಿತು, ಮಾಹಿತಿ ನೀಡಿದ್ದಾರೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಪಶು ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ, ಡಾಕ್ಟರ್ ಅನಿಲ ಪಾಟೀಲ.

<><><>

ಡಾ. ಅನೀಲ ಪಾಟೀಲ ಧ್ವನಿ 60 ಸೆಕೆಂದುಗಳು

<><><>

ಭಾರತದ ಮಹಿಳಾ ಕ್ರಿಕೆಟ್ ತಂಡ, ವಿಶ್ವ ಚಾಂಪಿಯನ್ ಆಗಿ, ಹೊರಹೊಮ್ಮಿದೆ. ಮುಂಬಯಿಯ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಜರುಗಿದ, ಐ.ಸಿ.ಸಿ. ಮಹಿಳಾ ಏಕದಿನ ವಿಶ್ವಕಪ್ ಫೈನಲ್ ಪಂದ್ಯದಲ್ಲಿ, ಭಾರತದ ವನಿತೆಯರ ತಂಡ, ಮೊದಲ ಬಾರಿಗೆ ವಿಶ್ವ ಕಿರೀಟ ಮುಡಿಗೇರಿಸಿಕೊಂಡು, ಚಾರಿತ್ರಿಕ ಸಾಧನೆ ಮಾಡಿತು. ದೀಪ್ತಿ ಶರ್ಮಾ ಹಾಗೂ ಶಫಾಲಿ ವರ್ಮಾ ಅವರ, ಆಲ್ ರೌಂಡರ್ ಆಟದ ಬಲದಿಂದ, ಭಾರತ 52 ರನ್ ಗಳಿಂದ ದಕ್ಷಿಣ ಆಫ್ರಿಕಾ ವನಿತೆಯರನ್ನು ಸೋಲಿಸಿತು.

<><><>

ಚಾಂಪಿಯನ್ ಭಾರತ ತಂಡಕ್ಕೆ, 37 ಕೋಟಿ 30 ಲಕ್ಷ ರೂಪಾಯಿ ಹಾಗೂ ರನ್ನರ್ಸ್ ಅಪ್ ದಕ್ಷಿಣ ಆಫ್ರಿಕಾ ತಂಡಕ್ಕೆ, 20 ಕೋಟಿ ರೂಪಾಯಿ ಬಹುಮಾನ, ಪ್ರಕಟಿಸಲಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ, ಭಾರತೀಯ ಮಹಿಳಾ ಕ್ರಿಕೆಟ್ ತಂಡವನ್ನು ಅಭಿನಂದಿಸಿದ್ದಾರೆ.

<><><>

ಮಲ್ಲಕಂಬ ನಮ್ಮ ದೇಶದ ಪ್ರಾಚೀನ ಕ್ರೀಡೆ; ಇತ್ತೀಚಿನ ದಿನಗಳಲ್ಲಿ, ಈ ಶ್ರೇಷ್ಠ ಕ್ರೀಡೆ ಮಹತ್ವ ಪಡೆದುಕೊಳ್ಳುತ್ತಿದೆ ಎಂದು, ಗದಗ ಜಿಲ್ಲಾ ಉಸ್ತುವಾರಿ ಸಚಿವ, ಎಚ್.ಕೆ.ಪಾಟೀಲ, ತಿಳಿಸಿದ್ದಾರೆ. ಗದಗ, ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ, ರಾಜ್ಯ ಮಟ್ಟದ, ಮಲ್ಲಕಂಬ ಕ್ರೀಡಾಕೂಟ ಉದ್ಘಾಟಿಸಿ, ಅವರು ಮಾತನಾಡಿದರು. ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಮಾತನಾಡಿ, ಮಲ್ಲಕಂಬ ಸ್ಪರ್ಧೆಯಲ್ಲಿ, 20 ಜಿಲ್ಲೆಗಳ 310 ಕ್ರೀಡಾಪಟುಗಳು ಭಾಗವಹಿಸಿದ್ದಾರೆ ಎಂದರು. ಮಲ್ಲಕಂಬ ಪಟು, 9ನೇ ತರಗತಿ ವಿದ್ಯಾರ್ಥಿನಿ, ಪದ್ಮಾ ಮಾತನಾಡಿ, ಮಧ್ಯಪ್ರದೇಶ ಹಾಗೂ ಬಿಹಾರದಲ್ಲಿ ನಡೆದ, 'ಖೇಲೋ ಇಂಡಿಯಾ, ಮಲ್ಲಕಂಬ' ಸ್ಪರ್ಧೆಯಲ್ಲೂ ಭಾಗವಹಿಸಿದ್ದಾಗಿ, ತಿಳಿಸಿದರು.

<><><>

ಅಂಗಾಂಗ ಕಸಿ ಕೈಗೊಳ್ಳಲು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ, ಮಾನ್ಯತೆ ಪಡೆದ, ಖಾಸಗಿ ಆಸ್ಪತ್ರೆಗಳ ಸಂಖ್ಯೆ, 84ಕ್ಕೆ ಏರಿಕೆಯಾಗಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಆರೋಗ್ಯ ಇಲಾಖೆ ದರ ನಿಗದಿ ಪಡಿಸಿದ್ದು, ಜೀವಸಾರ್ಥಕತೆ ಯೋಜನೆಯಡಿ, ಬಿ.ಪಿ.ಎಲ್. ಕಾರ್ಡ್ ಹೊಂದಿದವರು, ಪಟ್ಟಿಯಲ್ಲಿರುವ 84 ಆಸ್ಪತ್ರೆಗಳಲ್ಲಿ, ಉಚಿತವಾಗಿ ಅಂಗಾಂಗ ಕಸಿ ಮಾಡಿಸಿಕೊಳ್ಳಬಹುದು ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಪ್ರಕಟಿಸಿದ್ದಾರೆ. ಮಾನ್ಯತೆ ಪಡೆದ, ಖಾಸಗಿ ಆಸ್ಪತ್ರೆಗಳಲ್ಲೂ ಇನ್ನುಮುಂದೆ, ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಗಳಿಂದ, ಕುಟುಂಬದವರ ಅನುಮತಿಯೊಂದಿಗೆ, ಅಂಗಾಂಗ ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದೆ.

<><><>

ಕೋಲಾರ ತಾಲೂಕು, ಹೊಗರಿ ಗೊಲ್ಲಹಳ್ಳಿ ಗ್ರಾಮದ, ಕೃಷಿ ಹೊಂಡದಲ್ಲಿ ಕಾಲು ಜಾರಿ ಬಿದ್ದ, 6 ವರ್ಷದ ಮಗು, ಚಕ್ರವರ್ತಿಯನ್ನು ರಕ್ಷಿಸಲು ಮುಂದಾದ ಮಗುವಿನ ತಾಯಿ, 30 ವರ್ಷದ ಮಾಲಾ ಸೇರಿ, ಇಬ್ಬರೂ ಮುಳುಗಿ ಮೃತಪಟ್ಟ ದಾರುಣ ಘಟನೆ ವರದಿಯಾಗಿದೆ. ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ, ಪ್ರಕರಣ ದಾಖಲಾಗಿದೆ.

<><><>

ಕಾರ್ತಿಕ ಮಾಸ, ಶುಕ್ಲ ಪಕ್ಷದ, ದ್ವಾದಶಿಯ, ಗೋಧೂಳಿ ಲಗ್ನ ಮುಹೂರ್ತದಲ್ಲಿ, ತುಳಸಿ ಹಬ್ಬವನ್ನು ನಾಡಿನಾದ್ಯಂತ ಶ್ರದ್ಧಾ-ಭಕ್ತಿಯಿಂದ, ಹೆಂಗಳೆಯರು ಆಚರಿಸಿದರು. ತುಳಸಿ ಕಟ್ಟೆಯನ್ನು ಸಿಂಗರಿಸಿ, ತುಳಸಿ ಗಿಡವನ್ನು ವಧುವಿನಂತೆ ಅಲಂಕರಿಸಿ, ಕಬ್ಬಿನ ಮಂಟಪದಲ್ಲಿ, ಶ್ರೀ ವಿಷ್ಣು ಮತ್ತು ತುಳಸಿಗೆ, ಸಂಯುಕ್ತ ಪೂಜೆ ಸಲ್ಲಿಸಲಾಯಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ವಂದೇ ಭಾರತ', ನಾಲ್ಕು ರೈಲುಗಳಿಗೆ, 7ನೇ ತಾರೀಖು, ಪ್ರಧಾನಮಂತ್ರಿ ನರೇಂದ್ರ ಮೋದಿ, ಹಸಿರು ಧ್ವಜ.
- 'ಜಾಗರೂಕತೆ, ನಮ್ಮ ಸಾಮೂಹಿಕ ಹೊಣೆ' ಧ್ಯೇಯದ, ವಿಚಕ್ಷಣಾ ಜಾಗೃತಿ ಸಪ್ತಾಹ ಸಂಪನ್ನ.
- ಜಾನುವಾರುಗಳ ಕಾಲು-ಬಾಯಿ ರೋಗ ತಡೆ,ಉಚಿತ ಲಸಿಕೆ ನೀಡಿಕೆ, ರಾಷ್ಟ್ರೀಯ ಮಾಸಿಕ ಅಭಿಯಾನಕ್ಕೆ, ಇಂದು ಚಾಲನೆ.
- ಭಾರತದ ಮಹಿಳಾ ಕ್ರಿಕೆಟ್ ತಂಡ, ವಿಶ್ವ ಚಾಂಪಿಯನ್; ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿ ಅಭಿನಂದನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>